ಏಕದಿನ ಕ್ರಿಕೆಟ್ ಬ್ಯಾಟ್ಸ್‌ಮನ್‌ಗಳ ಪಾಲಿಗೆ ಸ್ವರ್ಗ ಎನ್ನುತ್ತಾರೆ. ಆದರೆ, 2019ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಕೆಲವು ಲೋ ಸ್ಕೋರಿಂಗ್ ಪಂದ್ಯಗಳು ಹೊಮ್ಮಿವೆ. ಬ್ಯಾಟ್ಸ್‌ಮನ್‌ಗಳ ಡ್ರೈವ್ ಗಳು, ಪುಲ್‌ಗಳಿಗೆ ಸವಾಲೊಡ್ಡುವ ವೇಗದ ಬೌಲಿಂಗ್ ಈ ಸಲ ಎದ್ದು ಕಾಣುತ್ತಿದೆ. ಸ್ಪಿನ್ನರ್‌ಗಳೂ ಚೆಂಡನ್ನು ಗಿರಗಿರ ತಿರುಗಿಸಿ ಎದುರಾಳಿಗಳನ್ನು ತಬ್ಬಿಬ್ಬು ಮಾಡುತ್ತಿರುವುದಕ್ಕೂ ಉದಾಹರಣೆಗಳಿವೆ. ಬ್ಯಾಟ್ಸ್‌ಮನ್‌ಗಳ ಮೆರವಣಿಗೆಯ ನಡುವೆ ಬೌಲರ್‌ಗಳ ಈ ಪರಾಕು ಮಜಾ ಕೊಡುತ್ತಿದೆ.

■ ವಿಶಾಖ ಎನ್.



ICC CRICKET WORLD CUP
ENGLAND & WALES
2019

# ವಿಶ್ವಕಪ್‌ನಲ್ಲಿ 'ಸ್ವಿಂಗಂ'ಗಳು!

ಜೋ ರೂಟ್ ಹಾಗೂ ಜಾಸ್ ಬಟ್ಲರ್ ಇಬ್ಬರೂ ಐದು ಓವರ್ ಅಂತರದೊಳಗೆ ಪೆವಿಲಿಯನ್ ಸೇರಿದರು. ಪಾಕಿಸ್ತಾನವು ಇಂಗ್ಲೆಂಡ್ ವಿರುದ್ಧದ ವಿಶ್ವಕಪ್ ಪಂದ್ಯದಲ್ಲಿ ಗೆಲುವು ಸಾಧಿಸಲು ಕಾರಣವಾದ ಮಹತ್ವದ ತಿರುವು ಅದು. ಮೊಹಮ್ಮದ್ ಅಮೀರ್, ಶಾದಾಬ್ ಖಾನ್ ಇಬ್ಬರ ಬೌಲಿಂಗ್ ವೈವಿಧ್ಯವನ್ನು ಮುನ್ನೆಲೆಗೆ ತಂದೇ ಈ ಪಂದ್ಯದ ಗೆಲುವಿನ ತಿರುವಿನ ಬಿಂದುಗಳನ್ನು ನಿಷ್ಕರ್ಷಿಸಲಾಗುತ್ತಿದೆ. ಪಾಕ್ ಗೆದ್ದಿದ್ದು, ಇಂಗ್ಲೆಂಡ್ ಸೋತಿದ್ದು ವಿಶ್ವಕಪ್ ಆತಿಥೇಯರಿಗೆ ತುಂಬಾ ಮುಖ್ಯವಾದ ತಲೆನೋವು.

ಇಂಗ್ಲೆಂಡ್ ಎದುರಿನ ಪಂದ್ಯ ಗೆಲ್ಲುವ ಮೊದಲು ಪಾಕಿಸ್ತಾನ ಸತತವಾಗಿ 11 ಏಕದಿನ ಪಂದ್ಯಗಳನ್ನು ಸೋತಿತ್ತು. 'ಚಾಂಪಿಯನ್ಸ್ ಟ್ರೋಫಿ ಫೈನಲ್'ನಲ್ಲಿ ಮೊಹಮ್ಮದ್ ಅಮೀರ್ ಹಾಗೂ ಶಾದಾಬ್ ಕಾಂಬಿನೇಷನ್ ಮಾಡಿದ್ದ ಮೋಡಿಯಿನ್ನೂ ನೆನಪಿದೆ. ಅದಾದ ಮೇಲೆ ಅವರಿಬ್ಬರೂ ಪಾಕಿಸ್ತಾನ ಆಡಿರುವ ಏಕದಿನದ ಪಂದ್ಯಗಳ ಅರ್ಧದಷ್ಟರಲ್ಲಿ ಒಟ್ಟಾಗಿ ಆಡಿಲ್ಲ. ಇಂಗ್ಲೆಂಡ್ ವಿರುದ್ಧ ಅವರಿಬ್ಬರೂ ಹಂಚಿಕೊಂಡ ನಾಲ್ಕು ವಿಕೆಟ್‌ಗಳ ಮಹತ್ವ ಕ್ರಿಕೆಟ್ ಸೂಕ್ಷ್ಮ ಬಲ್ಲವರಿಗೆ ಚೆನ್ನಾಗಿಯೇ ಗೊತ್ತು.

ಎರಡು ವಾರಗಳ ಹಿಂದಿನವರೆಗೂ ರಜೆಯ ಮೂಡಿನಲ್ಲೇ ಇದ್ದ ವಹಾಬ್ ರಿಯಾಜ್ ಈಗಿನ್ನೂ ಮೈಸಡಿಲ ಮಾಡಿಕೊಳ್ಳುತ್ತಿದ್ದಾರೆ. ಕೊನೆಯ ಓವರ್‌ಗಳಲ್ಲಿ ಅವರು ಇಂಗ್ಲೆಂಡ್‌ನ ದಾಡಸೀ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕಿದ ರೀತಿಗೂ ಮೆಚ್ಚುಗೆ ಸೂಸಲೇಬೇಕು.

ಪಾಕಿಸ್ತಾನ ಕ್ರಿಕೆಟ್‌ನ ಬೌಲಿಂಗ್ ಬಿಳಲುಗಳು ಮೊದಲಿನಂತೆ ಇಲ್ಲ ಎನ್ನಲು ದೀರ್ಘಕಾಲಿಕ ಕಾರಣಗಳಿದ್ದವು. ಅಮೀರ್ ತಮ್ಮ ವೃತ್ತಿಬದುಕಿನಲ್ಲೇ ಅತಿ ಗಾಢವಾದ ವಿಕೆಟ್ ಬರಗಾಲವನ್ನು ಇತ್ತೀಚಿನವರೆಗೂ ಎದುರಿಸಿದ್ದರು. ಅವರ ಸ್ವಿಂಗ್‌ಗಳಿಗೆ ಇನ್ನೂ ಜೀವವಿದೆ ಎನ್ನುವುದು ವೆಸ್ಟ್ ಇಂಡೀಸ್ ಹಾಗೂ ಇಂಗ್ಲೆಂಡ್ ಎದುರಿನ ಮೊದಲ ಎರಡು ಪಂದ್ಯಗಳಲ್ಲಿ ರುಜುವಾತಾಗಿದೆ. ವೆಸ್ಟ್ ಇಂಡೀಸ್ ಎದುರು ಪಾಕಿಸ್ತಾನ ಬರೀ 105 ರನ್‌ಗಳಿಗೆ ಆಲ್ ಔಟ್ ಆಯಿತು. ಆದರೆ, ಆ ಪಂದ್ಯದಲ್ಲೂ ಅಮೀರ್ ಮೂರು ವಿಕೆಟ್‌ಗಳನ್ನು

ನಂಬರ್ 1: ಭಾರತದ ಜಸ್‌ಪ್ರೀತ್ ಬೂಮ್ರಾ